ದಿನಾಂಕಃ 30-06-2026 ರಂದು **ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎ. ಎಸ್. ಎನ್. ವಕೀಲರಿಂದ

1. ನಾನು ಭದ್ರಿಕೊಪ್ಪಲು ಗ್ರಾಮದ ವಾಸಿ ಇರುತ್ತೇನೆ. ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಆರೋಪಿ ನನ್ನ ಕುಟುಂಬದ ಸ್ನೇಹಿತನಾಗಿದ್ದು ಅವರು ನನಗೆ ನನ್ನ ಚಿಕ್ಕ ವಯಸ್ಸಿನಿಂದ ಪರಿಚಯ ಇರುತ್ತಾರೆ ಹಾಗೂ ಅವರು ಮತ್ತು ನಾನು ಒಂದೇ ಊರಿನವರು ಇರುತ್ತೇವೆ. ಆರೋಪಿಯ ಗಂಡನ ಹೆಸರು ಬಿ. ಕೆ. ಮಂಜುನಾಥ ಇರುತ್ತದೆ. ಆರೋಪಿ ತನ್ನ ವ್ಯವಹಾರಕ್ಕೆ ಸಂಬಂಧಿಸಿದಂತೆ ನನ್ನಿಂದ ಹಣ ಪಡೆದುಕೊಂಡಿದ್ದರು. ಆರೋಪಿ ನನ್ನ ಮನೆಗೆ ಬಂದು ನನ್ನಿಂದ ಹಣ ಕೇಳಿದ್ದರು. ಆರೋಪಿ ಮಾರ್ಚ್ 2025 ನೇ ಇಸವಿಯ ಕೊನೆಯ ವಾರದಲ್ಲಿ ಹಣ ಕೇಳಿದ್ದರು. ಆರೋಪಿಗೆ ನಾನು ದಿನಾಂಕಃ 02-04-2025 ರಂದು ಹಣವನ್ನು ನೀಡಿದ್ದೆನು. ಅರೋಪಿಗೆ ನಾನು ನನ್ನ ಮನೆಯಲ್ಲಿಯೇ ಹಣ ನೀಡಿದ್ದೆನು. ಹಣವನ್ನು ಕೇಳಲು ಆರೋಪಿ ಒಬ್ಬರೇ ಬಂದಿದ್ದರು. ಆರೋಪಿಗೆ ನಾನು ಹಣ ನೀಡುವ ಸಮಯದಲ್ಲಿ ಬೇರೆ ಯಾರೂ ಇರಲಿಲ್ಲ.

2. ಆರೋಪಿಗೆ ನೋಟೀಸು ನೀಡಲು ನಮ್ಮ ವಕೀಲರಿಗೆ ನಾನೇ ಮಾಹಿತಿ ನೀಡಿದ್ದೆನು. ನಾನು ಟ್ರಾವೆಲ್ ಏಜೆನ್ಸಿಯನ್ನು ಹೊಂದಿದ್ದು ಅದರಿಂದ ಬಂದ ಆದಾಯ ನನ್ನ ಬಳಿ ಇತ್ತು. ನನ್ನ ಟ್ರಾವೆಲ್ ಏಜೆನ್ಸಿಗೆ ಸಂಬಂಧಿಸಿದ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಬಹುದು. ನನ್ನ ವಾರ್ಷಿಕ ವ್ಯವಹಾರ ಸುಮಾರು 1 ಕೋಟಿ ರೂಪಾಯಿಗಳು ಇದ್ದು ನನಗೆ ವರ್ಷಕ್ಕೆ ಸುಮಾರು 40 ಲಕ್ಷ ರೂಪಾಯಿಗಳಷ್ಟು ಲಾಭ ಇರುತ್ತದೆ. ನನ್ನ ಆದಾಯಕ್ಕೆ ಸಂಬಂಧಿಸಿದಂತೆ ನಾನು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರು ಪಡಿಸಬಹುದು.

3. ನಾನು ಆದಾಯ ತೆರಿಗೆ ಪಾವತಿದಾರನಾಗಿರುತ್ತೇನೆ. ಆರೋಪಿಗೆ 9,50,000/- ರೂಪಾಯಿಗಳು ನೀಡಿದ ಬಗ್ಗೆ ನಾನು ಆದಾಯ ತೆರಿಗೆ ರಿಟರ್ನ್ಸ್ ನಲ್ಲಿ ನಮೂದು ಮಾಡಿರುವುದಿಲ್ಲ. ಆರೋಪಿಗೆ ನಾನು ನಗದು ರೂಪದಲ್ಲಿ 9,50,000/-

ರೂಪಾಯಿಗಳನ್ನು ಪಾವತಿ ಮಾಡಿದ್ದೇನು. ಆರೋಪಿಗೆ ನೀಡಿದ 9,50,000/- ರೂಪಾಯಿಗಳನ್ನು ನಾನು ನನ್ನ ಬ್ಯಾಂಕ್ ಖಾತೆಯಿಂದ ಪಡೆದಿದ್ದೇನು. ಆ ಬಗ್ಗೆ ನನ್ನ ಬಳಿ ದಾಖಲೆ ಇರುತ್ತದೆ. ಅದನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಬಹುದು. ಗಿರಿಧರ ಎಂಬುವವರು ನನಗೆ ಪರಿಚಯ ಇರುವುದಿಲ್ಲ. ಆರೋಪಿ ಶಾಮಿಯಾನ ವ್ಯವಹಾರವನ್ನು ಮಾಡುತ್ತಾರೆ.

(ಈ ಹಂತದಲ್ಲಿ ಮುಂದುವರೆದ ಪಾಟಿ ಸವಾಲಿಗೆ ಸಮಯ ಕೋರಿರುತ್ತಾರೆ ಸಮಯ ನೀಡಲಾಯಿತು)

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು )

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ನಾಗಮಂಗಲ.